ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಜ್ಞಾನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ • ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 10.07.2015

**<u>ಪ್ರಕಟಣೆ ಕೃಪೆಗಾಗಿ</u>**

## "ಮೌಢ್ಯತೆಯ ಒಳಗೆ ನಮ್ಮ ಬದುಕು ಸಂಕಟ ಪಡುತ್ತಿದೆ"

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರಿನಲ್ಲಿ ದಿನಾಂಕ:10.07.2015 ರಂದು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಮೊದಲನೆಯ ವಿಶೇಷ ಉಪನ್ಯಾಸ ಮಾಲೆಯನ್ನು ಏರ್ಪಡಿಸಲಾಗಿತ್ತು. ವೈಜ್ಞಾನಿಕ ಚಿಂತಕರು ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತರು ಆದ ಶ್ರೀ ಹುಲಿಕಲ್ ನಟರಾಜು ರವರು "ಯುವಜನಾಂಗ ಮತ್ತು ವೈಚಾರಿಕತೆ" ಎಂಬ ವಿಷಯ ಕುರಿತು ಪ್ರಾತ್ಯಕ್ಷಿಕೆಯ ಮೂಲಕ ತಮ್ಮ ವಿಚಾರವನ್ನು ಮಂಡಿಸಿದರು.

ಧರ್ಮ, ನಂಬಿಕೆ, ಆಚರಣೆ, ಶಿಕ್ಷಣ ಈ ಎಲ್ಲಾ ವಿಷಯಗಳು ಮಾರುಕಟ್ಟೆಯ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಮಾನವೀಯ ಮೌಲ್ಯಗಳನ್ನು ಯುವಜನತೆಯಲ್ಲಿ ಬಿತ್ತಬೇಕಾದ ಶಿಕ್ಷಣವನ್ನು ಇಂದು ನೀಡಲಾಗುತ್ತಿಲ್ಲ. ಆದ್ದರಿಂದ ಮೌಲ್ಯಗಳಿಗೆ ಇಂದು ಪ್ರಾಮುಖ್ಯತೆ ಬರುತ್ತಿಲ್ಲ. ಮೌಢ್ಯತೆಯ ಒಳಗಡೆ ಯುವಜನತೆಯ ಬದುಕು ಈ ಕಾರಣದಿಂದ ಸಂಕಟ ಪಡುತ್ತಿದೆ. ಇಂದಿನ ಯುವಜನತೆಯಲ್ಲಿ ನಕಾರಾತ್ಮಕ ಚಿಂತನೆಗಳೇ ಹೆಚ್ಚುತ್ತಿರುವುದಕ್ಕೆ ಮೌಢ್ಯತೆಯೂ ಕಾರಣವಾಗಿದ್ದು, ಇದರ ಮೂಲಕ ಯುವಜನಾಂಗವನ್ನು ಅನೇಕ ಪ್ರಭಾವಿ ವ್ಯಕ್ತಿಗಳು ವಂಚಿಸುತ್ತಿದ್ದಾರೆ. ಇಂದಿನ ತಂತ್ರಜ್ಞಾನ ಯುಗದ ಬದುಕಿನಲ್ಲಿ ವಿದ್ಯಾರ್ಥಿಗಳು ಆತ್ಮವಿಶ್ವಾಸದ ಕೊರತೆಯಿಂದಾಗಿ ಸೋಲೊಪ್ಪಿಕೊಳ್ಳುತ್ತಿದ್ದಾರೆ. ಸತ್ಯವನ್ನು ಮರೆಮಾಚಿ ಸುಳ್ಳಿನ ಬದುಕಿನ ಕಡೆ ಯುವಜನತೆಯ ಬದುಕು ಹೋಗುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಆದ್ದರಿಂದ ಯುವಜನತೆ ವೈಚಾರಿಕ ಚಿಂತನೆಯನ್ನು ಮೈಗೂಡಿಸಿಕೊಳ್ಳುವುದರ ಮೂಲಕ ಸಮಾಜದಲ್ಲಿ ಅರಿವು ಮೂಡಿಸಿ ಜಾಗೃತರಾಗಬೇಕೆಂದು ಶ್ರೀ ಹುಲಿಕಲ್ ನಟರಾಜು ರವರು ತಿಳಿಸಿದರು. ಸಮಾಜದಲ್ಲಿರುವ ಅನೇಕ ಮೌಢ್ಯತೆಯ ಪವಾಡಗಳನ್ನು ಪ್ರಾತ್ಯಕ್ಷಿಕೆ ಮೂಲಕ ಬಯಲುಮಾಡಿ ವಿದ್ಯಾರ್ಥಿಗಳಲ್ಲಿ ವೈಚಾರಿಕ ಅರಿವನ್ನು ಮೂಡಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ ಬಿ ವಿ ಸಾಂಬಶಿವಯ್ಯನವರು ಮಾತನಾಡುತ್ತಾ, ಸಮಾಜದಲ್ಲಿ ಇಂದು ಮೂಢನಂಬಿಕೆ ತಾಂಡವವಾಡುತ್ತಿದೆ. ದೇವರು ಧರ್ಮ, ಭವಿಷ್ಯದ ಹೆಸರಿನಲ್ಲಿ ಅಜ್ಞಾನವನ್ನು ಬಿತ್ತಿ ಮೂಢನಂಬಿಕೆಗಳನ್ನು ಪೋಷಿಸಿ ಬೆಳಸಿಕೊಂಡು ಬರಲಾಗುತ್ತಿದೆ. ಅದರಲ್ಲಿಯೂ ಮಾಧ್ಯಮಗಳು ಇಂತಹ ಅಗ್ಗದ ಸಂಸ್ಕೃತಿಯನ್ನು ಪ್ರತಿ ದಿನ ಪ್ರಸಾರ ಮಾಡುವ ಮೂಲಕ ಜನತೆಯನ್ನು ಮತ್ತಷ್ಟು ಅಂಧಕಾರಕ್ಕೆ ತಳ್ಳುತ್ತಿವೆ. ವೈಚಾರಿಕತೆ ಎನ್ನುವುದು ಬಂಡಾಯವಾಗಬಾರದು ಸಮಾಜವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಒಂದು ಚಿಂತನೆಯಾಗಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಮೈಸೂರು ತಾಲ್ಲೂಕಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಡಾ. ನಂದೀಶ್ ಹಂಚೆ ಅವರನ್ನು ಕಾಲೇಜಿನ ಅಧ್ಯಾಪಕರ ಸಂಘದಿಂದ ಸನ್ಮಾನಿಸಲಾಯಿತು. ಸುವರ್ಣ ಮಹೋತ್ಸವ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ ಡಿ ಎಸ್ ಸದಾಶಿವಮೂರ್ತಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು. ಜಾಹ್ನವಿ ಎಸ್ ಪ್ರಾರ್ಥನೆ ಮಾಡಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಎಂ ಮಹದೇವಪ್ಪನವರು ಸ್ವಾಗತಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್ ಸೋಮಶೇಖರ್‌ರವರು ವಂದಿಸಿದರು ಹಾಗೂ ಸುವರ್ಣ ಮಹೋತ್ಸವ ಉಪನ್ಯಾಸ ಸಮಿತಿಯ ಸಂಚಾಲಕರಾದ ಡಾ. ಎಚ್ ಟಿ ಶೈಲಜರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಪ್ರಾಂಶುಪಾಲರು
(ಪ್ರೊ ಎಂ ಮಹದೇವಪ್ಪ)
ಪ್ರಾಂಶುಪಾಲರು,
ಜೆ.ಎಸ್.ಎಸ್. ಕಾಲೇಜು,
ಊಟಿ ರಸ್ತೆ, ಮೈಸೂರು-25

ಗೆ
ಸಂಪಾದಕರು
--------------
--------------
ಮೈಸೂರು